ಶ್ರೀ ಬಿ. ಬಸವಲಿಂಗಪ್ಪ.—ನಗರ ಬಡಾವಣೆ ಮಾಡಲಕ್ಕೆ ನೀತಿ ಇದ್ದೇ ಇದೆ. ಅದರ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಒಂದು ಯೋಜನೆಯನ್ನು ತಯಾರಿಸಿದ ಮೇರೆ ಅದಕ್ಕೆ ಸರ್ಕಾರ ಮಂಜೂರಾತಿಯನ್ನು ಕೊಟ್ಟು ಆ ಪ್ರಕಾರ ಎಲ್ಲ ಬಡಾವಣೆಗಳನ್ನೂ ಕೂಡ ಅಭಿವೃದ್ಧಿ ಮಾಡಲಕ್ಕೆ ತೆಗೆದುಕೊಂಡಿದ್ದೇವೆ. ಇದರಲ್ಲಿ ಮಾನ್ಯ ನಾಯುಡು ಅವರು ಹೇಳಿದ ಹಾಗೆ ಮಲತಾಯಿ ಧೋರಣೆಯಾಗಲೀ, ಈಕಡೆ ಮಾಡಬಾರದು, ಆ ಕಡೆ ಮಾಡಬಾರದು ಎನ್ನುವುದಾಗಲೀ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ನಾಯುಡು ಅವರು ಆಗ್ನೇಯ ಭಾಗಕ್ಕೆ ಮಲತಾಯಿ ಧೋರಣೆ ಇದೆಯೇ ಎಂದು ಕೇಳಿದರು. ಅದಕ್ಕಿಂತ ಹೆಚ್ಚಾಗಿ ಬನಶಂಕರಿ ಕಡೆ ಮಲತಾಯಿ ಧೋರಣೆ ಇದೆ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಆ ವಿಚಾರ ಇದರಲ್ಲಿ ಬರುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಕೋರಮಂಗಲ ಬಡವಾಣೆ ಹೊಸದಾಗಿ ಫಾರ್ಮೇಷನ್ ಆಗಿದೆ. ಅದು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಿಗೆ ಅನುಗುಣವಾಗಿದೆ. ಈ ಭಾಗದಲ್ಲಿ ಇಂಡಸ್ಟ್ರೀಯರ್ ಎಸ್ಟೇಟ್ ಮಾಡಿದರೆ ಅನೇಕ ಜನಗಳಿಗೆ ಉಪಕಾರವಾಗುತ್ತದೆ. ಇದನ್ನು ಯೋಚನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸ್ವಾಮಿ, (ಈ) ಗೆ ಉತ್ತರವಾಗಿ ಚಲ್ಲಘಟ್ಟ ಕೆರೆಯನ್ನು ಮುಚ್ಚಿದನಂತರ ಎಂದು ಉತ್ತರ ಕೊಟ್ಟಿದ್ದೀರಿ. ಚಲ್ಲಘಟ್ಟ ಕೆರೆ ಕೆಲಸ ಮುಗಿಯಲು ಇನ್ನು ಎಷ್ಟು ದಿವಸ ಆಗಬಹುದು ? ಅಲ್ಲಿ ಸೊಳ್ಳೆ ಕಾಟ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿದ ವಾದ ಸರಿಯಾಗಿದೆ. ಅಲ್ಲಿ ಟ್ಯಾಂಕ್ ಕೆಲಸ ಮುಗಿದ ನಂತರ ಬ್ರೀಚ್ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

Issue of Permanent Saguvali Chits to the Darkhastdars of Coffee Cultivation

130. Sri G. PUTTASWAMY (Mudigere).—

Will the Minister for Revenue be pleased to state :—

(*a*) the procedure adopted in granting darkhast lands for Coffee cultivation ;

(*b*) the rate at which the value of lands granted to the darkhastdars of coffee cultivation is fixed ;

(*c*) whether temporary Saguvali chit or a permanent saguvali chit will be issued after the recovery of the value of the land ;

(*d*) whether it has come to the notice of the Government that only temporary Saguvali chit is being issued even after the full recovery of the value of the land ;

(*e*) if so, the action taken by Government against them ; whether it has come to their notice that inconvenience is being caused to Darkhastdars to get loans from the Indian Coffee Board and Banks as permanent Saguvali chits are not issued to them even after full recovery of the value of the land ;

(SRI G. PUTTASWAMY)

(*f*) the difficulties of the Government in issuing the permanent Saguvali chits to those ryots who make full payment of value of land obtained from Government and whether the Government would issue immediate orders for issuing permanent Saguvali chits ?

Sri N. HUTCHAMASTHY GOWDA (Minister for Revenue).—

(*a*) The sanction will be accorded as per the Mysore Land Distribution Act, 1969.

(*b*) the value is fixed at market rates not less than Rs. 1,250 per hectare.

(*c*) A temporary Saguvali Chit will be issued for the first three years on the condition that the Tarakhastdar will be issued coffee registration certificate within that period from the Deputy Commissioner as per Coffee Registration Act.

(*d*) As per the standing orders the value of the land is recovered from the person to whom it is granted before the handing over the possession to him. The question of recovering the amount of the value in three instalments is under consideration of the Government.

(*e*) Does not arise.

) Does not arise.

ಶ್ರೀ ಜಿ. ಪುಟ್ಟಸ್ವಾಮಿ.—(ಈ) ಗೆ ಉತ್ತರವಾಗಿ ಸ್ಥಾಯೀ ಸೂಚನೆಯ ಪ್ರಕಾರ ಜಮೀನನ್ನು ಹಸ್ತಾಂತರ ಪಡೆದವನ ಸ್ವಾಧೀನ ಮಾಡುವ ಮೊದಲೇ ಜಮೀನಿನ ಬೆಲೆಯನ್ನು ನಿರ್ಧರಿಸಲಾಗುತ್ತದೆ. ಈ ಬೆಲೆಯನ್ನು 3 ಕಂತಿನೊಳಗೆ ವಸೂಲು ಮಾಡುವ ಪ್ರಶ್ನೆಯು ಸರಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಒಂದನೆಯದು ಜಮೀನು ಕಿಮ್ಮತ್ತು ವಸೂಲಿ ನಂತರ ಹಂಗಾಮಿ ಸಾಗುವಳಿ ಚೀಟಿ ಕೊಡಲಾಗುತ್ತಿದೆಯೇ ಇಲ್ಲವೇ ? ಎರಡನೆಯದು ಹಾಗೆ ಕೊಡುತ್ತಾ ಇದ್ದರೆ ಪೂರ್ತಿ ಹಣ ಕಟ್ಟಿಸಿಕೊಂಡು ಹಂಗಾಮಿ ಚೀಟಿ ಕೊಡುವುದರ ಅರ್ಥ ಏನು ? ಪೂರ್ತಿ ಹಣ ಕಟ್ಟಿಸಿಕೊಂಡವರಿಗೆ ಖಾಯಂ ಸಾಗುವಳಿ ಚೀಟಿ ಕೊಡುವುದಕ್ಕೆ ಇರುವ ಅಡ್ಡಿ ಆತಂಕಗಳು ಏನು ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಂಗಾಮಿ ಸಾಗುವಳಿ ಚೀಟಿ ಕೊಡುವ ಉದ್ದೇಶ ಸಾಗುವಳಿಗೆ ಜಮೀನು ಕೊಟ್ಟ 3 ವರ್ಷದೊಳಗೆ ಕಾಫಿ ನೆಡಬೇಕು. ಯಾವ ಉದ್ದೇಶಕ್ಕೋಸ್ಕರ ಜಮೀನು ಕೊಟ್ಟಿದ್ದೇವೆಯೋ ಆ ಉದ್ದೇಶ ನೆರವೇರದ ಹೊರತು ಖಾಯಂ ಚೀಟಿ ಕೊಡುವ ಅಭಿಪ್ರಾಯ ಇಲ್ಲ. ಖಾಯಂ ಸಾಗುವಳಿ ಚೀಟಿ ದೊರಕಬೇಕಾದರೆ ಕಾಫಿ ನೆಟ್ಟಿದ್ದಾರೆ ಎಂದು ಗೊತ್ತಾದ ಮೇಲೆ ಖಾಯಂ ಸಾಗುವಳಿ ಚೀಟಿ ಕೊಡತಕ್ಕ ಅಭಿಪ್ರಾಯ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇದರಲ್ಲಿ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಾ ? ಯಾವ ವಿಷಯ ಪರಿಶೀಲನೆಯಲ್ಲಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಗ ಗೊತ್ತುಮಾಡಿರತಕ್ಕಂಥ ಕಿಮ್ಮತ್ತನ್ನು ಸ್ವಲ್ಪ ಕಡಿಮೆ ಮಾಡಬೇಕೇ ಬೇಡವೇ ಎನ್ನುವುದು ಒಂದು. ಇನ್ನೊಂದು ತೆಗೆದುಕೊಳ್ಳತಕ್ಕಂಥ ಕಿಮ್ಮತ್ತು ಕಂತಿನಲ್ಲಿ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದು ಒಂದು.

ಶ್ರೀ ಜಿ. ಪುಟ್ಟಸ್ವಾಮಿ.—ಸಾಗುವಳಿ ಚೀಟಿ ಕೊಡದಿದ್ದರೆ ಆಗತಕ್ಕ ತೊಂದರೆ ಏನು ಎಂದರೆ ಬ್ಯಾಂಕುಗಳಲ್ಲಿ ಸಹಕಾರ ಸಂಘಗಳಲ್ಲಿ ಸಾಲ ದೊರೆಯುವುದಿಲ್ಲ. ಇದು ಪರದೇಶದ ಹಣ ಸಂಪಾದನೆ ಮಾಡುವ ಉದ್ದಿಮೆ. ಸಾಗುವಳಿ ಚೀಟಿ ಕೊಟ್ಟರೆ ಬೇಗ ಪರದೇಶದಿಂದ ಹಣ ಬರುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬ್ಯಾಂಕುಗಳಾಗಲಿ, ಸರ್ಕಾರದಿಂದಾಗಲಿ, ಹಣ ಸಾಲ ಕೊಡತಕ್ಕಂಥ ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳಬೇಕಾದರೆ ಖಾಯಂ ಸಾಗುವಳಿ ಚೀಟಿ ಬಂದ ಹೊರತು ಸಿಕ್ಕುವುದಿಲ್ಲ ಎನ್ನುವುದು ಗೊತ್ತಿದೆ. ಖಾಯಂ ಸಾಗುವಳಿ ಚೀಟಿ ಕೊಡಬೇಕಾದರೆ ಜಮೀನನ್ನು ಯಾವ ಉದ್ದೇಶಕ್ಕೆ ಪಡೆದುಕೊಂಡಿದ್ದರೋ ಆ ಉದ್ದೇಶಕ್ಕೆ ವಿರುದ್ಧವಾಗಿ ನಡೆಯಬಾರದು ಎಂದು ಪ್ರತಿಬಂಧಕ ಹಾಕಿರುವುದು.

ಶ್ರೀ ಎಸ್. ಬಂಗಾರಪ್ಪ.—ದರಖಾಸ್ತಿನಲ್ಲಿ ಕಾಫಿ ಬೆಳೆಯುವುದಕ್ಕೆ ಸರ್ಕಾರ ಜಮೀನು ಮಂಜೂರು ಮಾಡತಕ್ಕ ವಿಷಯದಲ್ಲಿ ಪುನಃ ದೊಡ್ಡ ಜಮೀನ್ದಾರರಿಗೇನೇ ಹೋಗುತ್ತಿದೆ ಎನ್ನುವ ಅಪಾದನೆ ಇದೆ. ಅದನ್ನು ತಪ್ಪಿಸುವುದಕ್ಕೋಸ್ಕರ ಬಡವರಿಗೆ ಹಂಚಿಕೆ ಮಾಡುವ ಬಗ್ಗೆ ಹೆಕ್ಟೇರಿಗೆ 1500 ರೂಪಾಯಿಗೆ ನಿಗದಿ ಮಾಡಿದ್ದೀರಾ. ಇದನ್ನು ಕೊಡಲು ಬಡವರಿಗೆ ಕಷ್ಟವಾಗುತ್ತದೆ. ಆದುದರಿಂದ ಆ ಬಡವರಿಗೆ ಇನ್ನೂ ಸುಲಭವಾದ ರೀತಿಯಲ್ಲಿ 1500 ರೂಪಾಯಿಗಿಂತಲೂ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಬಡವರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ಕಿಮ್ಮತ್ತನ್ನು ಒಂದು ಹೆಕ್ಟಾರಿಗೆ 1 50 ರೂಪಾಯಿಗಿಂತಲೂ ಕಡಿಮೆ ಮಾಡತಕ್ಕದ್ದು ಆಗಲಿ ಮತ್ತು ಕಂತಿನಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಆಗಲಿ ಈಗ ಪರಿಶೀಲನೆ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನೊಂದು ವಿಷಯ ಏನೆಂದರೆ 10 ಎಕರೆಗಿಂತಲೂ ಕಡಿಮೆ ಇರುವವರು ಕಾಫಿ ಬೆಳೆಯುವುದಕ್ಕೆ ಜಮೀನನ್ನು ಕೇಳಿದಾಗ ಅವನಿಗೆ ಕೊಡುವಾಗ ಅರ್ಧ ಹಣ ಮೊದಲು ತೆಗೆದು ಕೊಂಡ ಮೇಲೆ ರಿಯಾಯಿತಿ ತೋರಿಸಿ ಅನುಕೂಲ ಮಾಡಬೇಕು ಎನ್ನುವ ಉದ್ದೇಶವೂ ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, (ಎ) ಗೆ ಉತ್ತರವಾಗಿ The sanction will be accorded as per the Mysore Land Distribution Act, 1969 ಎಂದು ಹೇಳಿದ್ದೀರಾ ದಯವಿಟ್ಟು ಯಾವ ಯಾವ ವಿಧಾನವನ್ನು ಅನುಸರಿಸುತ್ತೀರಾ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಸ್ಪಷ್ಟವಾಗಿ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಇದೆ. ಮತ್ತೆ ಈಗ ಸಭೆಯ ಮುಂದೆ ಸಭೆಯು ಕಾಲ ವ್ಯರ್ಥವಾಗುತ್ತದೆ ಎನ್ನುವ ದೃಷ್ಟಿಯಿಂದ ಮಾನ್ಯ ಸದಸ್ಯರು ಲ್ಯಾಂಡ್ ಗ್ರಾಂಟ್ ರೂಲ್ಸ್ ನೋಡಿಕೊಳ್ಳಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಬಡವರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಬಡವರಿಗೆ ಹರಿಜನ-ಗಿರಿಜನರಿಗೆ ಅಪ್‌ಸೆಟ್ ಪ್ರೈಸ್‌ನಲ್ಲಿ ಕಂತುಗಳಲ್ಲಿ ಕೊಡುವಾಗ ಸಹಕಾರ ಸಂಘಗಳಲ್ಲಿ ಸಾಲ ಪಡೆದುಕೊಳ್ಳಲು ಅನುಕೂಲವಾಗುವಂತೆ ಸಹಕಾರ ಸಂಘಗಳ ಆಕ್ಟ್‌ನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗಾಗಲೇ ಮಾನ್ಯ ಸಭೆಗೆ ತಿಳಿಸಿದ್ದೇನೆ. ಬಡವರಿಗೆ ಸಿಕ್ಕಬೇಕು ಅನ್ನುವ ಉದ್ದೇಶ ಇದ್ದರೂ ಯಾವ ಉದ್ದೇಶಕ್ಕೋಸ್ಕರ ನಾವು ಭೂಮಿಯನ್ನು ಕೊಟ್ಟಿದ್ದೇವೆಯೋ ಆ ಉದ್ದೇಶ ನೆರವೇರದೆ ಹೋಗಬಹುದು ಎನ್ನುವ ಸಂದೇಹ ಇಟ್ಟುಕೊಂಡು ಪ್ರತಿಬಂಧಕ ಹಾಕಿರುವುದು. ಹರಿಜನ-ಗಿರಿಜನರಿಗೇ ಆಗಲಿ ಈ ಉದ್ದೇಶ ನೆರವೇರಬೇಕು ಎನ್ನುವ ಉದ್ದೇಶಕ್ಕೋಸ್ಕರ ಈ ಪ್ರತಿಬಂಧಕ ಹಾಕಿರುವುದು ಅನಿವಾರ್ಯವಾಗಿದೆ.

MADAM SPEAKER.—Now buestion hour is over.